**ನಾಂದಿಪದ**



ಕಲೆ: ಜಬೀವುಲ್ಲಾ ಎಂ. ಅಸದ್

# ಧಗೆ-ನಗೆಯ ನಡುವೆ

ಬದುಕಿನ ಸಾರ್ಥಕತೆ ಯಾವುದು ಎನ್ನುವ ಪ್ರಶ್ನೆಗೆ ನಿರ್ದಿಷ್ಟ ಉತ್ತರ ಎನ್ನುವುದಿಲ್ಲ. ಆ ಉತ್ತರ ಸಂದರ್ಭವನ್ನು ಅವಲಂಬಿಸಿರುತ್ತದೆ. ಆದರೆ, ಎಲ್ಲ ದೇಶ-ಕಾಲಗಳ ಅರಿವಿನ ಸಂಕಥನಗಳು ಬದುಕಿನ ಸಾರ್ಥಕತೆಯ ರೂಪದಲ್ಲಿ ನಮ್ಮ ಮುಂದಿಟ್ಟಿರುವ ಮಾದರಿಗಳಲ್ಲಿ ಬಹು ಮುಖ್ಯವಾದುದು – ಇತರರ ನೆಮ್ಮದಿಯಲ್ಲಿ ನಮ್ಮ ಬದುಕಿನ ಸಂತೋಷವನ್ನು ಕಂಡುಕೊಳ್ಳುವುದು. ಈ ಮಾದರಿಗೆ ಪೂರಕವಾಗಿ, ಸಮಷ್ಟಿಕೇಂದ್ರಿತವಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳಲು ಸಾಹಿತ್ಯ-ಕಲೆಗಳು ನೆರವಿಗೆ ಬರುತ್ತವೆ; ವ್ಯಕ್ತಿತ್ವವನ್ನು ಉದಾತ್ತಗೊಳಿಸುತ್ತ, ಸರ್ವೋದಯವನ್ನು ವ್ಯಕ್ತಿಗತ ತುರ್ತಿನ ರೂಪದಲ್ಲಿ ನೋಡಲು ಪ್ರೇರೇಪಿಸುತ್ತವೆ. ಹೀಗೆ, ಸಾರ್ವಜನಿಕ ಚಟುವಟಿಕೆಗಳಲ್ಲಿ ವೈಯಕ್ತಿಕ ಹಿತವನ್ನು ನಿರ್ಲಕ್ಷಿಸಿದ ವಿಶಿಷ್ಟ ವ್ಯಕ್ತಿ ಸ. ರಘುನಾಥ. ಕನ್ನಡ ಮತ್ತು ತೆಲುಗು ಭಾಷೆಗಳ ನಡುವಣ ರಾಯಭಾರಿಯಂತಿರುವ ಅವರು, ಶಿಕ್ಷಕರಾಗಿ ಶಾಲೆ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆ ದೊಡ್ಡದು. ಸ್ವತಃ ಅಂಗವೈಕಲ್ಯದಿಂದ ಬಳಲುತ್ತಿದ್ದರೂ, ಸಮಾಜದ ವಿರೂಪಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಅವರದು ದಣಿವರಿಯದ ಉತ್ಸಾಹ. ಅಂತಃಕರಣದ ಮೂರ್ತರೂಪದಂತಿರುವ ಈ ವಿಶಿಷ್ಟ ಸಾಧಕನ ಸಂದರ್ಶನ 'ಮಯೂರ'ದ ಜೂನ್ ಸಂಚಿಕೆಯ ವಿಶೇಷ.

ಜಿ.ವಿ. ಅಯ್ಯರ್ ನಿರ್ದೇಶನದ 'ಹಂಸಗೀತೆ' ಸಿನಿಮಾಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲಿ, ಆ ಸಿನಿಮಾದ ಕುರಿತ ವಿಸ್ತೃತ ಬರಹವೊಂದು ಈ ಸಂಚಿಕೆಯಲ್ಲಿದೆ. ತತ್ ಕ್ಷಣದ ರಂಜನೆ ಮಾತ್ರವಲ್ಲದೆ, ಸಾಂಸ್ಕೃತಿಕವಾಗಿಯೂ ಒಂದು ಸಿನಿಮಾ ನಮಗೆ ಹೇಗೆ ಮುಖ್ಯವಾಗುತ್ತದೆ ಎನ್ನುವುದಕ್ಕೆ ಉದಾಹರಣೆಯಂತಿರುವ 'ಹಂಸಗೀತೆ'ಯ ಕುರಿತ ಈ ಬರಹ, ಕನ್ನಡ ಸಿನಿಮಾಗಳನ್ನು 'ಕನ್ನಡ ಸಂಸ್ಕೃತಿ'ಯ ಭಾಗವಾಗಿ ನೋಡುವ ಪ್ರಯತ್ನಕ್ಕೆ ಪೂರಕವಾಗಿದೆ.

ಬಿಸಿಲಿನೊಂದಿಗೆ ಮಳೆಮೋಡಗಳು ಕಣ್ಣಾಮುಚ್ಚಾಲೆಯಾಡುತ್ತಿರುವ ಸಂದರ್ಭದಲ್ಲಿ ಬದುಕಿನಲ್ಲಿನ ಧಗೆ ಮತ್ತು ನಗೆ ಎರಡನ್ನೂ ಸಂಕೇತಿಸುವಂಥ ಕಥೆ-ಕವಿತೆಗಳನ್ನು ಈ ಸಂಚಿಕೆ ಒಳಗೊಂಡಿದೆ.

**ಮಯೂರ ಬಳಗ**
**editormy@mayura.co.in**